**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**

**ಮೂಡಿಗೆರೆ**

**FDP.7/2018**

| | | |
|---|---|---|
| ಸಾಕ್ಷಿದಾರರ ಹೆಸರು | : ಸಚಿನ್ ಎಂ.ಸಿ | ಸಿಡಬ್ಲೂ-1 |
| ತಂದೆಯ ಹೆಸರು | : ಚಂದ್ರಪ್ಪ | |
| ವಯಸ್ಸು | : 35 ವರ್ಷ | |
| ಉದ್ಯೋಗ | : ಸರ್ವೇಯರ್ | ಪ್ರಮಾಣ ವಚನ ಬೋಧಿಸಲಾದ |
| ವಾಸಸ್ಥಳ | : ಚಿಕ್ಕಮಗಳೂರು | ದಿನಾಂಕಃ 07.08.2026. |

**:ಮುಖ್ಯ ವಿಚಾರಣೆ ನ್ಯಾಯಾಲಯದಿಂದ:**

ನಾನು 2020 ರಿಂದ 2023 ರವರೆಗೂ ಮೂಡಿಗೆರೆಯ ಸರ್ವೇ ಇಲಾಖೆಯಲ್ಲಿ ಸರ್ವೇಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.22.11.2022 ರ ನ್ಯಾಯಾಲಯದ ಆದೇಶವನ್ನು ನನ್ನ ಮೇಲಾಧಿಕಾರಿಯವರಿಂದ ಸ್ವೀಕರಿಸಿಕೊಂಡಿರುತ್ತೇನೆ. ಅದೇ ದಿನ ನಾನು ಪಕ್ಷಗಾರರಿಗೆ ನೋಟೀಸನ್ನು ನೀಡಿ, ದಿ.30.11.2022 ರಂದು ಮೋಜಣಿ ದಿನಾಂಕವನ್ನು ನಿಗದಿಪಡಿಸಿ ಸ್ಥಳದಲ್ಲಿ ಹಾಜರಿರುವಂತೆ ತಿಳಿಸಿರುತ್ತೇನೆ. ದಿ.30.11.2022 ರಂದು ಬೆ.11.00 ರ ಸಮಯಕ್ಕೆ ಸ್ಥಳಕ್ಕೆ ಹೋಗಿ 3, 5, 6 ನೇ ಅರ್ಜಿದಾರರು ಮತ್ತು 3 ನೇ ಎದುರುದಾರರ ಸಮಕ್ಷಮದಲ್ಲಿ ಮೋಜಣಿ ಕ್ರಮವನ್ನು ಜರುಗಿಸಿರುತ್ತೇನೆ. ನಂತರ ವರದಿಯನ್ನು ತಯಾರಿಸಿ ದಿ.05.12.2022 ರಂದು ನ್ಯಾಯಾಲಯಕ್ಕೆ ನೀಡಿರುತ್ತೇನೆ.

ನ್ಯಾಯಾಲಯಕ್ಕೆ ನೀಡಿದ ನಿವೇದನೆಯನ್ನು ನಿಸಿ-1, ಮಹಜರ್ ನ್ನು ನಿಸಿ-2, ನಕ್ಷೆಯನ್ನು ನಿಸಿ-3 ರಿಂದ 6, ಪಕ್ಷಗಾರರಿಗೆ ನೀಡಿದ ನೋಟೀಸನ್ನು ನಿಸಿ-7, ಅಂಚೆ ರಶೀದಿಯನ್ನು ನಿಸಿ-8 ರಿಂದ 17, ನ್ಯಾಯಾಲಯದಿಂದ ನೀಡಿದ ನೋಟೀಸನ್ನು ನಿಸಿ-18 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: 4 ನೇ ಪ್ರತಿವಾದಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದ:**

ನಾನು ಅಳತೆ ಕಾರ್ಯಕ್ಕೆ ಹೋಗುವ ಪೂರ್ವದಲ್ಲಿ ಕಲ್ಮನೆ ಸ.ನಂ.18 ರ ಸಂಪೂರ್ಣ ದಾಖಲಾತಿಯನ್ನು ಪರಿಶೀಲಿಸಿರುತ್ತೇನೆ. ಸದರಿ ಸ.ನಂ. ಗೆ ಸಂಬಂಧಿಸಿದಂತೆ ಕಂದಾಯ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ. ಅಳತೆ ಕಾರ್ಯವನ್ನು ಚೈನ್ ಮತ್ತು ಜಿ.ಪಿ.ಎಸ್. ಮುಖಾಂತರ ಅಳತೆ ಮಾಡಿರುತ್ತೇನೆ. ಸದರಿ ವಿಷಯವನ್ನು ನಾನು ನನ್ನ ವರದಿಯನ್ನು ನಮೂದಿಸಿರುವುದಿಲ್ಲ ಆದರೆ ನಾವು ಅಳತೆ ಕಾರ್ಯವನ್ನು ಮಾಡಲು ಚೈನ್ ಮತ್ತು ಜಿ.ಪಿ.ಎಸ್. ನ್ನು ಉಪಯೋಗಿಸುತ್ತೇವೆ ಎಂದು ನುಡಿಯುತ್ತಾರೆ. ಸ.ನಂ.18 ರ ಸಂಪೂರ್ಣ ಜಮೀನನ್ನು ಅಳತೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸದರಿ ಜಮೀನು ಪೋಡಾಗಿರುವ ಕಾರಣ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ನೀಡಿದ ನೋಟೀಸ್ ನಲ್ಲಿ ಪಕ್ಷಗಾರರು ನೀಡಿದ

ಸೂಚನಾವಳಿಗಳನ್ನು ನೀಡದೇ ಇರುವ ಕಾರಣ ಪರಿಶೀಲಿಸಿರುವುದಿಲ್ಲ. ಸಾಮಾನ್ಯವಾಗಿ ಅಳತೆ ಕಾರ್ಯಕ್ಕೆ ಹೋಗುವ ಪೂರ್ವದಲ್ಲಿ ಎಲ್ಲಾ ದಾಖಲಾತಿಗಳನ್ನು ತೆಗೆದುಕೊಂಡು ಹೋಗಬೇಕು ಎಂದರೆ ಸರಿ. ಅಳತೆ ಕಾರ್ಯವನ್ನು ಮಾಡಲು ನೋಟೀಸನ್ನು ಸ್ವೀಕರಿಸಿಕೊಂಡ ನಂತರದಲ್ಲಿ ಸಂಪೂರ್ಣ ದಾಖಲಾತಿಯನ್ನು ಒದಗಿಸಿರುವುದಿಲ್ಲ ಎಂಬುದರ ಬಾಬ್ತು ನಾನು ಪ್ರಶ್ನಿಸಿರುವುದಿಲ್ಲ. ಪಕ್ಷಗಾರರು ನೀಡಿರುವ ವರದಿಯನ್ನು ಪರಿಶೀಲಿಸದೇ ಇರುವ ಕಾರಣ ನಾನು ನೀಡಿರುವ ವರದಿ 4 ನೇ ಎದುರುದಾರರಿಗೆ ಬಾದ್ಯವಾಗಿರುವುದಿಲ್ಲ ಎಂದರೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಅಳತೆ ಕಾರ್ಯದ ಸಮಯದಲ್ಲಿ ಚೌಡಮ್ಮನ ಗುಡಿ ಮತ್ತು ನೀರಿನ ಟ್ಯಾಂಕ್ ಇರುವ ಬಗ್ಗೆ ಗಮನಿಸಿರುವುದಿಲ್ಲ. ಸಾಮಾನ್ಯವಾಗಿ ಗುಡಿ ಮತ್ತು ನೀರಿನ ಟ್ಯಾಂಕ್ ಇದ್ದರೆ ಅದು ಎಲ್ಲಾ ಗ್ರಾಮಸ್ಥರಿಗೂ ಮೀಸಲಿಡಲಾಗಿರುತ್ತದೆ ಎಂದರೆ ಸರಿ. ಮೃತ ವ್ಯಕ್ತಿಗಳಿಗೆ ಭಾಗವನ್ನು ನೀಡಲು ನಮಗೆ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯದ ಆದೇಶದ ಪ್ರಕಾರ ನಾವು ಪಾಲನೇ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ನಾನು ಒಟ್ಟು 4 ಸ.ನಂ. ಗಳ ಮೋಜಣಿ ಕಾರ್ಯವನ್ನು ಮಾಡಿರುತ್ತೇನೆ. ನಾನು ಅಳತೆಯನ್ನು ನ್ಯಾಯಾಲಯದ ಆದೇಶದ ಪ್ರಕಾರವಾಗಿ ಮಾಡಿರುತ್ತೇನೆ. ನನ್ನ ವರದಿಯಲ್ಲಿ ರಸ್ತೆಯ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.